ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ತರೀಕೆರೆ.
ಓ.ಎಸ್. ನಂಬರ್.36/2019

ಸಾಕ್ಷಿಯ ಹೆಸರು : ಹೆಚ್.ಶಾಂತಪ್ಪ
ತಂದೆಯ ಹೆಸರು : ಹನುಮಂತಯ್ಯ ಡಿ.ಡಬ್ಲ್ಯು 4
ವಯಸ್ಸು : 62 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಜೋಡಿ ಭೋಗಿ ಕೆರೆ

ದಿನಾಂಕಃ22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಪ್ರತಿವಾದಿಗಳ ಪರ ವಕೀಲರಿಂದ

ನನಗೆ ವಾದಿ ಮತ್ತು ಪ್ರತಿವಾದಿಯವರ ಕುಟುಂಬದ ಪರಿಚಯ ಇದೆ. 2 ನೇ ಪ್ರತಿವಾದಿ ತೀರಿಕೊಂಡಿದ್ದಾರೆ. ಅವರಿಗೆ ಇಬ್ಬರು ಹೆಂಡತಿಯರು ಇರುತ್ತಾರೆ. ಮೊದಲ ಹೆಂಡತಿ ಹೆಸರು ಚಂದ್ರಮ್ಮ ಮತ್ತು 2 ನೇ ಹಂಡತಿ ಹೆಸರು ಕರಿಯಮ್ಮ, ಇಬ್ಬರೂ ಜೀವಂತ ಇದ್ದಾರೆ. ಮೊದಲನೇ ಹೆಂಡತಿ ಚಂದ್ರಮ್ಮಗೆ ಒಬ್ಬ ಮಗ ಇದ್ದನು ಆತನು ತೀರಿಕೊಂಡಿದ್ದಾನೆ. 2 ನೇ ಹೆಂಡತಿಗೆ ಕೂಡ ಒಬ್ಬ ಮಗ ಇದ್ದಾನೆ. ಮಗ ತೀರಿಕೊಂಡ ಮೇಲೆ ವಾದಿ ಎಲ್ಲಿ ವಾಸ ಇದ್ದರೂ ಎಂದು ನನಗೆ ಖಚಿತವಾಗಿ ಗೊತ್ತಿಲ್ಲ. ನಾನು ದೊಡ್ಡ ಭೋಗಿ ಕೆರೆ ಗ್ರಾಮ ಪಂಚಾಯತಿಯ ಅಧ್ಯಕ್ಷ ಆಗಿದ್ದೆ ಎಂದರೆ ಸರಿ. ನಾನು ಗ್ರಾಮದ ಹಿರಿಯ ಕೂಡ ಆಗಿದ್ದೆ ಎಂದರೆ ಸರಿ. ನನ್ನ ಸಮಕ್ಷಮ ಗ್ರಾಮದ ವ್ಯಾಜ್ಯಗಳ ಕುರಿತು ಪಂಚಾಯತಿಗಳು ಆಗುತ್ತವೆ ಎಂದರೆ ಸರಿ. ವಾದಿಯ ಗಂಡ ಮತ್ತು ಮಗ ತೀರಿಕೊಂಡ ನಂತರ ಒಂದು ಬಾರಿ ಜೀವನಾಂಶದ ಕುರಿತು ವಾದಿ ನನ್ನ ಬಳಿ ಬಂದಿದ್ದಳು, ಪಂಚಾಯತಿಯಲ್ಲಿ 2 ನೇ ಹೆಂಡತಿಯ ಮಗನಾದ ಶರತ್ ಗೌಡನು ಒಪ್ಪಿಕೊಂಡ ಕಾರಣ ಪ್ರಕರಣವನ್ನು ಮುಗಿಸಲಾಯಿತು. ವಾದಿಯ ಗಂಡ ಬದುಕಿದ್ದಾಗ ವಾದಿಯ ಗಂಡ ಬದುಕಿದ್ದಾಗ ವಾದಿ ಮತ್ತು ಆಕೆಯ ಗಂಡನ ನಡುವೆ ಜೀವನಾಂಶದ ಕುರಿತು ಒಂದು ಬಾರಿ ಪಂಚಾಯತಿ ಕೂಡ ಆಗಿತ್ತು. ನಾವು ಗ್ರಾಮದ ಹಿರಿಯರು ಸ್ವಲ್ಪ ಹಣವನ್ನು ವಾದಿಗೆ ಆಕೆಯ ಗಂಡನ ಕುಟುಂಬದಿಂದ ಕೊಡಿಸಿದ್ದೆವು. ಹಣ 1 ಲಕ್ಷದಿಂದ 2 ಲಕ್ಷದವರೆಗೆ ಇರಬಹುದು. ಆ ಬಗ್ಗೆ ಯಾವುದೇ ಬರವಣಿಗೆ ಆಗಲಿಲ್ಲ. ಇಷ್ಟನ್ನು ಹೊರತುಪಡಿಸಿ ವಾದಿ ಮತ್ತು ಅವರ ಕುಟುಂಬದವರ ವಿಷಯಗಳು ನನಗೆ ಗೊತ್ತಿಲ್ಲ ಮತ್ತು ವಾದಿ ತನ್ನ ಭಾಗವನ್ನು ಪಡೆದುಕೊಂಡ ಬಗ್ಗೆ ಕೂಡ ನನಗೆ ಮಾಹಿತಿ ಇಲ್ಲ.

( ಈ ಹಂತದಲ್ಲಿ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು.)

ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

ನಾನು ಮೇಲೆ ಹೇಳಿದ ರಾಜಿ ಪಂಚಾಯತಿಯಲ್ಲಿ ವಾದಿ ಒಟ್ಟು ಕುಟುಂಬದಿಂದ ತನಗೆ ಬರಬೇಕಾದ ಪಾಲನ್ನು ಹಣದ ರೂಪದಲ್ಲಿ ಪಡೆದುಕೊಂಡಿದ್ದಳು ಎಂದರೆ ಸರಿಯಲ್ಲ. ಒಟ್ಟು 2 ಲಕ್ಷ ರೂ. ಹಣವನ್ನು ತನ್ನ ಭಾಗ ಎಂದು ಪಡೆದುಕೊಂಡಿದ್ದಳು ಎಂದರೆ ಸರಿಯಲ್ಲ. ಅದೇ ರೀತಿ ಮಗಳ ಮರಣದ ನಂತರ ಸಂಪೂರ್ಣ ಇನ್ಸೂರೆನ್ಸ್ ಹಣವನ್ನು ವಾದಿಯೇ ಪಡೆದುಕೊಂಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳಿದ 1 ಲಕ್ಷದಿಂದ 2 ಲಕ್ಷ ಹಣವನ್ನು ವಾದಿಯೇ ಗಂಡನೇ ಪಂಚಾಯತಿದಾರರ ಸಮಕ್ಷಮ ವಾದಿಗೆ ಕೊಟ್ಟಿದ್ದಾನೆ ಎಂದರೆ ಸರಿ. ಬೀರೂರಿನಲ್ಲಿಇರುವ ಪ್ಲಾಟುಗಳನ್ನು ಕೂಡ ಮಗನ ಮರಣದ ನಂತರ ವಾದಿಯೇ ತನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಒಂದನ್ನು ಗಂಡನ ಮರಣದ ನಂತರ ವಾದಿಯೇ ವರ್ಗಾವಣೆ ಮಾಡಿಸಿಕೊಂಡಿದ್ದಾಳೆ ಎಂದರೆ ಗೊತ್ತಿಲ್ಲ ಮತ್ತು ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನ ಮಾಡುತ್ತಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ.

ಪಾಟೀಸವಾಲುಃವಾದಿ ಪರ ವಕೀಲರಿಂದಃ

ವಾದಿಯನ್ನು ಅವರ ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರಿರುತ್ತಾರೆ. ನ್ಯಾಯದ ಹಿತದೃಷ್ಠಿಯಿಂದ ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.